ಸಮಾಜ ಸುಧಾರಕರನ್ನು ಗೌರವಿಸಲು ಸರ್ಕಾರದ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀಮತಿ ಲೀಲಾದೇವಿ ಆರ್‌ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ದುರ್ಬಲ ಸೇತುವೆಗಳ ದುರಸ್ತಿ.

2726 (3762)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಳ್ಳಾರಿ ಜಿಲ್ಲೆಯಲ್ಲಿರುವ ಅಲ್ಲಿಪುರ ಕುಡತಿನಿ ಗಾದಿಗವಾರು ಮತ್ತು ಹೊಸಪೇಟೆ ಹತ್ತಿರ ಕೆಲವು ಇಕ್ಕಟ್ಟಾದ ಮತ್ತು ದುರ್ಬಲ ಸೇತುವೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹೇಳಿರುವ ಎಲ್ಲಾ ಸೇತುವೆಗಳ ಮೇಲೆ ಭಾರಿ ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ ಸೇತುವೆಗಳು ದುರ್ಬಲವಾಗಿವೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಈ ಸೇತುವೆಗಳನ್ನು ದುರಸ್ತಿಪಡಿಸಲು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1. ಹೌದು.

2. ಗಮನಕ್ಕೆ ಬಂದಿದೆ.

3. ವಿದೇಶಿ ಸಾಲ ನೆರವು: ಖಾಸಗಿಯವರಿಂದ ಸೇತುವೆಗಳ ಪುನರ್ ನಿರ್ಮಾಣ ಮತ್ತು ರಸ್ತೆಯ ಭಾಗವನ್ನು ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುತ್ತಿದೆ.

ವಿಷಯ: ರಾಜ್ಯದಲ್ಲಿ ಪಶುಭಾಗ್ಯ ನಿಗಮ ಸ್ಥಾಪನೆ ಕುರಿತು.

2727 (3764)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಪಶುಸಂಗೋಪನಾ ರಾಜ್ಯ